

بسم اللہ الرّحمٰن الرّحیم

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುರಿತು ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ ಕೆಲವು ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **27-02-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಮೀರ್ ಹಿಸಾಮುದ್ದೀನ್ ಸಾಹೇಬರಿಗೆ ಸಂಬಂಧಿಸಿ ಒಂದು ಘಟನೆಯನ್ನು ಅವರ ಪುತ್ರ ಮೀರ್ ಹಾಮಿದ್ ಶಾರವರ ಪುತ್ರನ ವಿವಾಹದ ಸಂದರ್ಭದಲ್ಲಿ ವಿವರಿಸಿದರು. ಅದೇನೆಂದರೆ, ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮೀರ್ ಹಾಮಿದ್ ಶಾರವರ ಬಗ್ಗೆ ಹೀಗೆ ಹೇಳಿದ್ದರು: 'ಶಾಹ್ ಸಾಹೇಬರು ಓರ್ವ ದರ್ವೇಶ್ ಮನೋಭಾವದ ವ್ಯಕ್ತಿಯಾಗಿದ್ದಾರೆ. ಅಲ್ಲಾಹನಿಗೆ ಇಂತಹ ಜನರೇ ಪ್ರಿಯರಾಗಿದ್ದಾರೆ' ಎಂದು.

ಹಝ್ರತ್ ಹಿಸಾಮುದ್ದೀನ್ ಸಾಹೇಬರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಬಹಳ ನಿಕಟ ಸಂಬಂಧವಿದ್ದಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಾನು ಮಹ್‌ದೀ ಮಸೀಹ್ ಎಂದು ವಾದಿಸಿದ ನಂತರ ಒಮ್ಮೆ ಸಿಯಾಲ್‌ಕೋಟ್‌ಗೆ ಹೋದಾಗ ಹಕೀಮ್ ಹಿಸಾಮುದ್ದೀನ್ ಸಾಹೇಬರಿಗೆ ಬಹಳ ಸಂತೋಷವಾಯಿತು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ವಾಸಕ್ಕೆ ಒಂದು ಮನೆಯನ್ನು ವ್ಯವಸ್ಥೆಗೊಳಿಸಿದರು. ಆದರೆ ಆ ಮನೆಯ ಚಾವಣಿಯಲ್ಲಿ ಸುತ್ತುಗೋಡೆಗಳಿರಲಿಲ್ಲ. ಆದುದರಿಂದ ಸಿಯಾಲ್‌ಕೋಟ್‌ನಿಂದ ಬೇಗನೆ ಮರಳಿ ಹೋಗಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿರ್ಧರಿಸಿದರು. ಚಾವಣಿಯ ಸುತ್ತುಗೋಡೆ ಬಗ್ಗೆ ನೆನಪಿಡಬೇಕಾದುದೇನೆಂದರೆ ಹದೀಸಿನಲ್ಲಿ ಸಹ ಅದರ ಪ್ರಸ್ತಾಪ ಇದೆ. ಸುತ್ತುಗೋಡೆಗಳಿಲ್ಲದ ಚಾವಣಿಯ ಮೇಲೆ ಮಲಗಿ ನಿದ್ರಿಸಬಾರದು ಎಂದು. ಆ ಕಾಲಘಟ್ಟದಲ್ಲಿ ಬೇಸಿಗೆ ಕಾಲದಲ್ಲಿ ಜನರು ಚಾವಣಿಗಳ ಮೇಲೆ ಮಲಗಿ ನಿದ್ರಿಸುತ್ತಿದ್ದರು. ಏಕೆಂದರೆ ಆಗ ಫ್ಯಾನ್ ಮೊದಲಾದುವು ಇರಲಿಲ್ಲ. ಚಾವಣಿಯಲ್ಲಿ ಸುತ್ತುಗೋಡೆ ಇಲ್ಲದ ಕಾರಣ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಮನೆ ವಾಸಿಸಲು ಯೋಗ್ಯವಲ್ಲ ಎಂದು ಹೇಳಿ ಅಲ್ಲಿಂದ ಮರಳಿ ಹೋಗಲು ನಿರ್ಧರಿಸಿದರು. ಈ ವಿಷಯ ಹಿಸಾಮುದ್ದೀನ್ ಸಾಹೇಬರಿಗೆ ತಿಳಿದಾಗ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದರು: ಈ ಮನೆ ವಾಸಯೋಗ್ಯವಲ್ಲವಾದುದರಿಂದ ಹುಝೂರ್ ಇಲ್ಲಿಂದ ಹೋಗಲು ನಿರ್ಧರಿಸಿರುವುದಾಗಿ ತಿಳಿಯಿತು. ತಮಗೆ ಈ ನಗರದಲ್ಲಿ ವಾಸಕ್ಕೆ ಯೋಗ್ಯವಾದ ಬೇರೆ ಯಾವುದೇ ಮನೆಯನ್ನು ನಾನು ವ್ಯವಸ್ಥೆ ಮಾಡುವೆನು. ತಾವು ಇಲ್ಲಿಗೆ ಆಗಮಿಸಿದುದು ಬೇಗನೆ ಹೋಗಲಿಕ್ಕಾಗಿರಲಿಲ್ಲ. ನೀವು ಬೇಗನೆ ಮರಳಿದರೆ ಜನರ ದೃಷ್ಟಿಯಲ್ಲಿ ನಾನು ಅಪಮಾನಿತನಾಗುವೆನು. ಈ ಮಾತುಗಳನ್ನು ಅವರು ಎಷ್ಟು ವಿನಯಾನ್ವಿತರಾಗಿ ಹೇಳಿದರೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ನಿರ್ಧಾರ ಬದಲಾಯಿಸಿದರು. ಅವರು ಹೇಳಿದರು: "ನಾವು ಈಗ ಹೋಗುವುದಿಲ್ಲ."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಓರ್ವ ವ್ಯಕ್ತಿ ಬಂದು ಹೇಳಿದರು: 'ನಾನು ತಮ್ಮನ್ನು ಬಹಳ ಪ್ರಶಂಸಿಸುವವನಾಗಿದ್ದೇನೆ. ಆದರೆ ತಮ್ಮಿಂದ ಒಂದು ಬಹಳ ದೊಡ್ಡ ತಪ್ಪು ಆಗಿದೆ. ಅದೇನೆಂದರೆ. ಈ ಮೌಲವಿಗಳು ಯಾರದೇ ಮಾತನ್ನು ಅಂಗೀಕರಿಸುವುದಿಲ್ಲ. ನಾವು ಅನ್ಯರ ಮಾತನ್ನು ಅಂಗೀಕರಿಸಿದರೆ ನಮಗೆ ಅದು ಅಪಮಾನಕರ ಎಂದು ಅವರು ಭಾವಿಸುತ್ತಾರೆ. ಅವರನ್ನು ಅಂಗೀಕರಿಸುವಂತೆ ಮಾಡುವುದು ಹೇಗೆಂದರೆ ಅವರ ಬಾಯಿಗಳಿಂದಲೇ 'ನಾವು ಅಂಗೀಕರಿಸುತ್ತೇವೆ' ಎಂಬ ಮಾತು ಹೊರಡಿಸುವಂತೆ ಮಾಡುವುದಾಗಿದೆ. ಉದಾಹರಣೆಗೆ ಪ್ರವಾದಿ ಈಸಾ(ಅ)ರ ಮರಣದ ಬಗ್ಗೆ ಚರ್ಚಿಸಲು ಮೌಲವಿಗಳ ಒಂದು ಸಭೆ ಸೇರಿಸಿ ಅವರೊಡನೆ ಹೀಗೆ ಹೇಳಬೇಕಾಗಿತ್ತು. 'ನೋಡಿರಿ, ಈಸಾ ನಬಿ ಜೀವಿಸಿರುವರೆಂದು ಹೇಳುವುದರಿಂದ ಕ್ರೈಸ್ತರಿಗೆ ಬಹಳ ಸಹಾಯಕವಾಗಿದೆ. ಅವರು ಇಸ್ಲಾಮ್ ವಿರುದ್ಧ ಆಕ್ಷೇಪ ಮಾಡಿ ಹಾನಿ ಉಂಟುಮಾಡುತ್ತಾರೆ. ನಿಮ್ಮ ಪ್ರವಾದಿ ಮೃತರಾದರು. ನಮ್ಮ ಧರ್ಮ ಸ್ಥಾಪಕ ಈಗಲೂ ಆಕಾಶದಲ್ಲಿ ಜೀವಿಸಿದ್ದಾರೆ. ಆದುದರಿಂದ ಅವರು ಶ್ರೇಷ್ಠರು ಮಾತ್ರವಲ್ಲ ದೇವನೇ ಆಗಿದ್ದಾರೆ ಎಂದೆಲ್ಲಾ ಕ್ರೈಸ್ತರು ಹೇಳುತ್ತಾರೆ. ಅವರಿಗೆ ನಾವು ಏನೆಂದು ಉತ್ತರಕೊಡಬೇಕು?' ಎಂದು ತಾವು ಅವರೊಡನೆಯೇ ಕೇಳಬೇಕಾಗಿತ್ತು. ಆಗ ಆ ವಿದ್ವಾಂಸರು ಹೇಳುತ್ತಿದ್ದರು. 'ನೀವೇ ಉತ್ತರ ಹೇಳಿರಿ' ಎಂದು. ಆಗ ತಾವು ಹೇಳಬೇಕು 'ಪವಿತ್ರ ಖುರ್‌ಆನಿನ ಇಂತಿಂತಹ ವಚನಗಳಿಂದ ಈಸಾ ನಬಿ ಮೃತರಾದರೆಂದು ಸಾಬೀತಾಗುತ್ತದೆ.' ಆಗ ಮೌಲವಿಗಳು ಹೇಳುವರು: 'ಹೌದು, ಈ ಮಾತು ಸರಿ. ನೀವು ಬಿಸ್ಮಿಲ್ಲಾಹ್ ಉಚ್ಚರಿಸಿ ಪ್ರಕಟಿಸಿರಿ. ನಾವು ನಿಮ್ಮನ್ನು ಬೆಂಬಲಿಸುತ್ತೇವೆ' ಎಂದು ಹೇಳುತ್ತಿದ್ದರು. ಇದೇ ರೀತಿ ಹದೀಸುಗಳಲ್ಲಿ ಈಸಾ ನಬಿ ಪುನರಾಗಮಿಸುವ ಬಗ್ಗೆ ಹೇಳಲಾಗಿದೆ. ಆದರೆ ಈಸಾನಬಿ ಮೃತರಾಗಿರುವಾಗ ಇದರ ಅರ್ಥವೇನೆಂದು ನೀವು ಅವರನ್ನೇ ಕೇಳಬೇಕಾಗಿತ್ತು. ಆಗ ಮೌಲವಿಗಳು ಹೇಳುವರು: 'ನೀವೇ ಮಸೀಹರಾಗಿದ್ದೀರಿ' ಎಂದು. ಆಗ ಉಳಿದ ಮೌಲವಿಗಳು ಸಹ ಅದನ್ನು ಅಂಗೀಕರಿಸುವರು.'

ಹೀಗೆ ಆ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದಾಗ ಅವರು ಹೇಳಿದರು: ನನ್ನ ವಾದಗಳು ನನ್ನ ವೈಯ್ಯಕ್ತಿಕ ಚಾತುರ್ಯದ ಕಾರಣದಿಂದಾಗಿರುತ್ತಿದ್ದರೆ ನಿಶ್ಚಯವಾಗಿಯೂ ನಾನು ನೀವು ಹೇಳಿದಂತೆ ಮಾಡುತ್ತಿದ್ದೆ. ಆದರೆ ನಾನು ವಾದಿಸಿರುವುದು ಅಲ್ಲಾಹನ ಆಜ್ಞೆ ಪ್ರಕಾರವಾಗಿದೆ. ಆದುದರಿಂದ ಅಲ್ಲಾಹನು ನನ್ನೊಂದಿಗೆ ಹೇಗೆ ಹೇಳಿದನೋ ಅದೇ ರೀತಿ ನಾನು ಮಾಡಿರುವೆನು. ಎಂದು ಉತ್ತರಿಸಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಇಲ್‌ಹಾಮ್ ಹೀಗಿದೆ: **ಆಗ್ ಸೆ ಹಮೇಂ ಮತ್ ಡರಾವ್ರೋ, ಆಗ್ ಹಮಾರಿ ಗುಲಾಮ್ ಬಲ್ಕೆ ಗುಲಾಮೋಂ ಕಿ ಗುಲಾಮ್ ಹೈ.** (ಬೆಂಕಿಯ ಮೂಲಕ ನಮ್ಮನ್ನು ಹೆದರಿಸಬೇಡ. ಬೆಂಕಿ ನಮ್ಮ ದಾಸ ಮಾತ್ರವಲ್ಲ ದಾಸನ ದಾಸನಾಗಿದೆ.)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆ ಹೀಗೆ ವಿವರಿಸುತ್ತಾರೆ: "1903ರಲ್ಲಿ ಅಬ್ದುಲ್ ಗಫೂರ್ ಎಂಬ ಒಬ್ಬನು ಇಸ್ಲಾಮ್‌ನಿಂದ ಧರ್ಮತ್ಯಾಗ ಮಾಡಿ ಆರ್ಯ ಸಮಾಜವನ್ನು ಸೇರಿ ಧರ್ಮಪಾಲ್ ಎಂಬ ಹೆಸರನ್ನು ಇಟ್ಟುಕೊಂಡನು. ಆತ 'ತರ್ಕೇ ಇಸ್ಲಾಮ್' ಎಂಬ ಹೆಸರಿನಲ್ಲಿ ಒಂದು ಪುಸ್ತಕ ಬರೆದನು. ಅದಕ್ಕೆ ಉತ್ತರವನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ 'ನೂರುದ್ದೀನ್' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಧರ್ಮಪಾಲ್ ಹೀಗೆ ಬರೆದಿದ್ದನು: 'ಹಝ್ರತ್ ಇಬ್ರಾಹೀಮರಿಗೆ ಬೆಂಕಿ ತಣ್ಣಗಾಯಿತೆಂದು ಹೇಳುತ್ತಾರೆ. ಆದರೆ ಬೇರೆ ಪ್ರವಾದಿಗಳಿಗೆ ಹಾಗೆ ಏಕೆ ಆಗಲಿಲ್ಲ?' ಎಂದು. ಇದಕ್ಕೆ ಉತ್ತರವಾಗಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೀಗೆ ಬರೆಯಲು ಉದ್ದೇಶಿಸಿದ್ದರು- 'ಪವಿತ್ರ ಖುರ್‌ಆನ್‌ನಲ್ಲಿ ಬೆಂಕಿ ಎಂದು ಹೇಳಿದುದು ವಾಸ್ತವಿಕವಾಗಿ ಬೆಂಕಿಯ ಬಗ್ಗೆ ಅಲ್ಲ. ಅದು ವಿರೋಧಗಳ ಬೆಂಕಿಯನ್ನು ಸೂಚಿಸುತ್ತದೆ' ಎಂಬ ಉತ್ತರವನ್ನು ಬರೆದಿದ್ದರು. ಇದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಓದಿ ಕೇಳಿಸಲಾಯಿತು. ಈ ಉತ್ತರವನ್ನು ಬರೆಯುವುದಾಗಿ ಹೇಳಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: 'ಹೀಗೆ ವ್ಯಾಖ್ಯಾನಿಸುವ ಅಗತ್ಯವೇನಿದೆ? ನನ್ನನ್ನು ಸಹ ಅಲ್ಲಾಹನು ಇಬ್ರಾಹೀಮ್ ಎಂದು ಹೆಸರಿಸಿರುವನು. ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರನ್ನು ಬೆಂಕಿಗೆ ಹಾಕಿದಾಗ ಬೆಂಕಿ ತಣ್ಣಗಾಯಿತೆಂದು ಹೇಳಿದುದು ಜನರಿಗೆ ಅರ್ಥವಾಗುವುದಿಲ್ಲವಾದರೆ ಅವರು ನನ್ನನ್ನು ಬೆಂಕಿಗೆ ಹಾಕಿ ನೋಡಲಿ. ನಾನು ಬೆಂಕಿಯಿಂದ ಸುರಕ್ಷಿತನಾಗಿ ಹೊರಗೆ ಬರುತ್ತೇನೋ ಇಲ್ಲವೋ ಎಂದು ಅವರು ನೋಡಲಿ.'

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿರ್ದೇಶಿಸಿದ ಪ್ರಕಾರ ಇದೇ ರೀತಿ ಉತ್ತರವನ್ನು 'ನೂರುದ್ದೀನ್' ಎಂಬ ಆ ಗ್ರಂಥದಲ್ಲಿ ಖಲೀಫ ಅವ್ವಲ್ ಬರೆದರು. ಅವರು ಹೇಳಿದರು: 'ನಮ್ಮ ಇಮಾಮರನ್ನು ಬೆಂಕಿಗೆ ಹಾಕಿ ನೋಡಿರಿ. ಯಾವ ರೀತಿ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಬೆಂಕಿಯಿಂದ ರಕ್ಷಿಸಿದನೋ ಅದೇ ರೀತಿ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ನಿಶ್ಚಯವಾಗಿಯೂ ನಮ್ಮ ಇಮಾಮರನ್ನು ರಕ್ಷಿಸುವನು' ಎಂದು ಉತ್ತರಿಸಿದರು"

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಅದ್ಭುತ ಕೃತ್ಯಗಳ ಬಗ್ಗೆ ಪ್ರವಾದಿಗಳಿಗೆಯೇ ಚೆನ್ನಾಗಿ ತಿಳಿದಿರುತ್ತದೆ. ಅವು ಅವರ ಸ್ವಂತ ಅನುಭವಗಳಾಗಿರುತ್ತವೆ. ಅಲ್ಲಾಹನೊಂದಿಗೆ ಅರ್ಧ-ಅರ್ಧ ಗಂಟೆ ಮಾತನಾಡುವ ಮತ್ತು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವವರ ಸ್ಥಿತಿಯ ಬಗ್ಗೆ ಸಾಮಾನ್ಯರಂತೂ ಇರಲಿ, ವಿಶಿಷ್ಟ ಜನರು ಸಹ ಸರಿಯಾಗಿ ಅರ್ಥಮಾಡಿಕೊಳ್ಳಲಾರರು. ಆದರೆ ಸ್ವಪ್ನವನ್ನೇ ಕಾಣದ ಅಥವಾ ಕಂಡಿದ್ದರೆ ಸಹ ಒಂದೆರಡಕ್ಕಿಂತ ಹೆಚ್ಚು ಕಾಣದ ಅಥವಾ ಹೆಚ್ಚಿಗೆ ಕಂಡಿದ್ದರೆ ಅವು ಅಲ್ಲಾಹನಿಂದ ಲಭಿಸಿದುವೋ ಅಥವಾ ತಮ್ಮ ಸ್ವಂತ ಯೋಚನಾ ಲಹರಿಯ ಫಲವಾಗಿದೆಯೋ ಎಂಬ ಸಂಶಯ ಹೊಂದುವ ಸಾಮಾನ್ಯ ಜನರು ಪ್ರವಾದಿಗಳ ಈ ಅನುಭವವನ್ನು ಅರ್ಥಮಾಡಿಕೊಳ್ಳಲಾರರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ಥಿತಿ ಹೇಗಿತ್ತೆಂದರೆ ಅವರು ಹೇಳುತ್ತಿದ್ದರು, ನಾನು ತಲೆದಿಂಬಿಗೆ ತಲೆ ಇಟ್ಟ ಕೂಡಲೆ ನನಗೆ ಹೀಗೆ ಶಬ್ದ ಕೇಳಿಸುತ್ತದೆ. 'ದಿನವಿಡೀ ಜನರು ನಿನ್ನನ್ನು ಬೈಯ್ಯುತ್ತಾ ಇದ್ದರು. ಆದರೆ ನೀನು ಬೇಸರಿಸಬೇಡ. ನಾನು ನಿನ್ನ ಜೊತೆಗಿದ್ದೇನೆ' ಎಂದು. ತಲೆದಿಂಬಿಗೆ ತಲೆ ಇರಿಸಿ ಅನಂತರ ಎದ್ದೇಳುವ ತನಕ ಅಲ್ಲಾಹನು ಹೀಗೆ ಸಾಂತ್ವನ ನೀಡುತ್ತಾನೆ. ಕೆಲವು ಸಾರಿ ರಾತ್ರಿ ಇಡೀ ಹೀಗೆ ಇಲ್‌ಹಾಮ್ ಆಗುತ್ತಾ ಇರುತ್ತದೆ: **ಇನ್ನೀ ಮಅರ್‌ರಸೂಲಿ ಅಖ್‌ವಮು** (ನಾನು ನನ್ನ ಸಂದೇಶವಾಹಕನೊಂದಿಗೆ ನಿಂತಿದ್ದೇನೆ.)

ಈ ವಿಷಯಗಳನ್ನು ಸಾಮಾನ್ಯರು ಅರ್ಥಮಾಡಿಕೊಳ್ಳಲಾರರು. ಆದರೆ ಅಲ್ಲಾಹನ ಸಾಮೀಪ್ಯ ಗಳಿಸಿದ ಹಿರಿಯರು ಮತ್ತು ಸಾತ್ವಿಕರು ಇದನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳಬಲ್ಲರು. ಆದರೆ ಅವರು ಸಹ ಒಬ್ಬ ಪ್ರವಾದಿಯಷ್ಟು ಅರ್ಥಮಾಡಿಕೊಳ್ಳಲಾರರು. ಪ್ರವಾದಿ ಪ್ರವಾದಿಯೇ ಆಗಿರುತ್ತಾರೆ. ಪ್ರವಾದಿಯ ಜೊತೆ ಅಲ್ಲಾಹನು ಹೇಗೆ ಮಾತನಾಡುತ್ತಾನೆಂದರೆ ಅದರ ಉದಾಹರಣೆ ಬೇರೆ ಸ್ಥಳದಲ್ಲಿ ಕಾಣಲು ಸಿಗಲಾರದು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನನಗೆ ದೊರೆತ ಸ್ವಪ್ನಗಳು ಮತ್ತು ಇಲ್‌ಹಾಮ್‌ಗಳು ಇಷ್ಟರ ತನಕ ಸಾವಿರದ ಸಂಖ್ಯೆಯನ್ನು ತಲಪಿದೆ. ಆದರೆ ಅವುಗಳೆಲ್ಲಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಒಂದು ರಾತ್ರಿ ಲಭಿಸುವಂತಹ ಇಲ್‌ಹಾಮ್‌ಗಳಿಗೆ ಸರಿಸಮಾನವಾಗಿರಲಾರದು. ಅವರಿಗೆ **ಇನ್ನೀ ಮಅರ್‌ರಸೂಲಿ ಅಖ್‌ವಮು** (ನಾನು ನನ್ನ ಸಂದೇಶವಾಹಕನೊಂದಿಗೆ ನಿಂತಿದ್ದೇನೆ) ಎಂಬ ಇಲ್‌ಹಾಮ್ ಸಂಜೆಯಿಂದ ಬೆಳಗ್ಗಿನ ತನಕ ಅವತೀರ್ಣವಾಗುತ್ತಾ ಇರುತ್ತಿತ್ತು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನಾವು ನಮ್ಮ ಹಿರಿಯರಿಗೆ ಗೌರವ

ನೀಡಬೇಕಾದುದು ಆವಶ್ಯಕವಾಗಿದೆ. ಆದರೆ ನಾವು ನಮ್ಮ ಹಿರಿಯರನ್ನು ಪ್ರವಾದಿಗಳ ವಿರುದ್ಧವಾಗಿ ನಿಲ್ಲಿಸುವುದಾದರೆ ಅದು ನಾವು ಅವರನ್ನು ಗೌರವರಹಿತರನ್ನಾಗಿ ಮಾಡಿದಂತಾಗುತ್ತದೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಆಗಲಿ ಅಥವಾ ನಾನೇ ಆಗಲಿ ಅಥವಾ ಮುಂದೆ ಆಗಮಿಸಲಿರುವ ಯಾರೇ ಖಲೀಫ ಆಗಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳಿದರು ಎಂದು ಹೇಳುವಾಗ, ಅದಕ್ಕೆ ಎದುರಾಗಿ 'ಇಂತಿಂತಹ ಖಲೀಫ ಹೀಗೆ ಹೇಳಿದ್ದಾರಲ್ಲಾ' ಎಂದು ಹೇಳುವುದು ತಪ್ಪಾದ ಕೆಲಸವಾಗಿದೆ. ಅದು ಸರಿಯಾದ ತಿಳುವಳಿಕೆ ಇಲ್ಲದೆ ಹೇಳುವುದಾದರೆ ಅದು ಪ್ರಮಾಣವಾಗಲಾರದು. ಸರಿಯಾಗಿ ಖಲೀಫ ಹೇಳಿದರೆಂದು ಪ್ರಸ್ತಾಪಿಸುವುದಾದರೆ ಅದು ತನ್ನ ಗುರುವಿನೆದುರಿಗೆ ನಿಲ್ಲಿಸಿದಂತಾಗುತ್ತದೆ. ಒಬ್ಬ ಖಲೀಫ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ಪಷ್ಟ ವ್ಯಾಖ್ಯಾನದ ವಿರುದ್ಧ ಹೇಳಿದರೆ ಅದನ್ನು ಅವರ ಗಮನಕ್ಕೆ ತರಬೇಕು. ಖಲೀಫ ತನ್ನ ವ್ಯಾಖ್ಯಾನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಯಾವುದಾದರೂ ಉಲ್ಲೇಖಕ್ಕೆ ಅನುಸಾರವಾಗಿದೆ ಎಂದು ಸ್ಪಷ್ಟಪಡಿಸುವುದಾದರೆ ಅದನ್ನು ಅಂಗೀಕರಿಸಬೇಕು. ಹಾಗೆ ಅಲ್ಲವಾದರೆ ಖಲೀಫರು ತನ್ನನ್ನು ತಿದ್ದಿಕೊಳ್ಳಬೇಕು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮತ್ತು ಅವರ ಖಲೀಫರ ಮಾತುಗಳ ಮಧ್ಯೆ ವಿರೋಧಾಭಾಸಗಳಿರಲು ಸಾಧ್ಯವಿಲ್ಲ. ಆದರೆ ಕೆಲವು ಸಾರಿ ಸರಿಯಾದ ತಿಳುವಳಿಕೆ ಇಲ್ಲದೆ ತಪ್ಪು ಗ್ರಹಿಕೆಯಿಂದ ಹೀಗೆ ಸಂಭವಿಸಬಹುದು."

ಚಂದ್ರ ಗ್ರಹಣ ಮತ್ತು ಸೂರ್ಯಗ್ರಹಣ ಸಂಭವಗಳ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: "ಪಂಜಾಬಿನ ಗುಜರಾತ್ ಪ್ರದೇಶದ ಒಬ್ಬ ಮೌಲವಿ ಜನರೊಡನೆ ಹೀಗೆ ಹೇಳುತ್ತಾ ಇದ್ದರು– ಮಿರ್ಝಾ ಸಾಹೇಬರ ವಾದದಿಂದ ನೀವು ಮೋಸ ಹೋಗಬೇಡಿರಿ. ಹದೀಸಿನಲ್ಲಿ ಸ್ಪಷ್ಟವಾಗಿ ಬರೆದಿದೆ ಮಹ್‌ದಿಯ ಕಾಲದಲ್ಲಿ ರಮಝಾನ್ ತಿಂಗಳಲ್ಲಿ ಸೂರ್ಯಚಂದ್ರ ಗ್ರಹಣಗಳು ಸಂಭವಿಸುವುವು ಎಂದು. ಈ ಗ್ರಹಣಗಳು ಸಂಭವಿಸದೆ ಮಿರ್ಝಾ ಸಾಹೇಬರ ವಾದವನ್ನು ಸತ್ಯವೆಂದು ಪರಿಗಣಿಸಲು ಸಾಧ್ಯವಿಲ್ಲ.

ಈ ಮೌಲವಿ ಜೀವಿಸಿರುವಾಗಲೇ ಸೂರ್ಯಚಂದ್ರ ಗ್ರಹಣಗಳ ಬಗ್ಗೆ ಭವಿಷ್ಯವಾಣಿ ಈಡೇರಿದುವು. ಈ ಮೌಲವಿಯ ನೆರೆಹೊರೆಯಲ್ಲಿ ಒಬ್ಬ ಅಹ್ಮದಿ ವಾಸಿಸುತ್ತಿದ್ದರು. ಅವರು ಹೀಗೆ ವರದಿ ಮಾಡುತ್ತಾರೆ: ಸೂರ್ಯನಿಗೆ ಗ್ರಹಣ ಹಿಡಿದಾಗ ಈ ಮೌಲವಿ ಗಾಬರಿಗೊಂಡು ತನ್ನ ಮನೆಯ ಚಾವಣಿಯ ಮೇಲೇರಿ ಅತ್ತಿತ್ತ ನಡೆದಾಡುತ್ತಾ ಹೇಳತೊಡಗಿದರು– 'ಈ ಜನರು ಈಗ ದಾರಿತಪ್ಪಿ ಹೋಗುವರು' ಎಂದು. ಅವರು ಅದನ್ನು ಮತ್ತೆ ಮತ್ತೆ ಹೇಳುತ್ತಲೇ ಇದ್ದರು. 'ಈ ಭವಿಷ್ಯವಾಣಿ ಈಡೇರಿದೆ ಆದುದರಿಂದ ಈಗ ಜನರು ಮಾರ್ಗದರ್ಶನ ಪಡೆದು ಹಝ್ರತ್ ಮಿರ್ಝಾ ಸಾಹೇಬರನ್ನು ನಂಬುವರು' ಎಂದು ಆ ಮೌಲವಿ ಯೋಚಿಸಬೇಕಾಗಿತ್ತು. ಆದರೆ ಅವರು ಹಾಗೆ ಯೋಚಿಸಲಿಲ್ಲ.

ಇದೇ ರೀತಿ ಕ್ರೈಸ್ತರು ಸಹ ವರ್ತಿಸುತ್ತಾರೆ. 'ಹಿಂದಿನ ಧಾರ್ಮಿಕ ಗ್ರಂಥಗಳು ವಿವರಿಸಿದ ಚಿಹ್ನೆಗಳು ಕಾಣಿಸಿಕೊಂಡಿವೆ' ಎಂದು ಅವರು ಒಪ್ಪುತ್ತಾರೆ. ಆದರೆ ಹಝ್ರತ್ ಮುಹಮ್ಮದ್ﷺರ ವಾದದ ಬಗ್ಗೆ 'ಈ ಸಮಯದಲ್ಲಿ ಆಕಸ್ಮಿಕವಾಗಿ ಓರ್ವ ಸುಳ್ಳುವಾದಿ ತಾನು ಪ್ರವಾದಿಯೆಂದು ವಾದಿಸಿ ಬಿಟ್ಟನು' ಎಂದು ಹೇಳುತ್ತಾರೆ. ಮುಸ್ಲಿಮರು ಹೇಳುವುದು ಸಹ ಇದೇ ರೀತಿಯಾಗಿದೆ. 'ಚಿಹ್ನೆಗಳು ಈಡೇರಿದುವು. ಆದರೆ ಆಕಸ್ಮಿಕವಾಗಿ ಒಬ್ಬ ಸುಳ್ಳುಗಾರ ವಾದಿಸಿರುವನು' ಎಂದು! ಆದರೆ ವಿಚಿತ್ರವಾದುದೇನೆಂದರೆ ಸುಳ್ಳುಗಾರನಿಗೆ ಅವರ ದೃಷ್ಟಿಯಲ್ಲಿ ಚಿಹ್ನೆಗಳ ಬೆಂಬಲ ಸಿಗುತ್ತದೆ. ಆದರೆ ಸತ್ಯವಾದಿಗೆ ಈ ಕಾಲದಲ್ಲಿ ಅಂತಹ ಬೆಂಬಲ ದೊರಕುವುದಿಲ್ಲ!

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕ್ಷಮೆಯ ಗುಣವನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಸ್ಥಳದಲ್ಲಿ ಹೀಗೆ ಬರೆಯುತ್ತಾರೆ: "ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಶತ್ರುಗಳು ಹಿಡಿಗೂಡಲ್ಪಟ್ಟರು. ವಿಚಾರಣೆಯ ವೇಳೆ ನ್ಯಾಯಾಧೀಶರು ಹೇಳಿದರು 'ಇವರ ವಿರುದ್ಧ ದೋಷಾರೋಪವನ್ನು ಮಿರ್ಝಾ ಸಾಹೇಬರು ವಾಪಸು ಪಡೆಯುವುದಿಲ್ಲವೆಂದಾದರೆ ಮಾತ್ರ ನಾನು ವಿಚಾರಣೆ ಮುಂದುವರಿಸುತ್ತೇನೆ; ನಂತರ ಅವರೇನಾದರೂ ಇವರಿಗೆ ಕ್ಷಮೆ ನೀಡಲು ವಿನಂತಿಸುವುದಾದರೆ, ಇವರನ್ನು ವೃಥಾ ನಾನು ಬಂಧನದಲ್ಲಿಡಬೇಕಾದ ಆವಶ್ಯಕತೆ ಏನಿದೆ?' ಆಗ ವಕೀಲರು ಮತ್ತು ಕೆಲವು ಸ್ನೇಹಿತರು ಹೇಳಿದರು 'ಹಾಗಲ್ಲ, ಅವರಿಗೆ ಶಿಕ್ಷೆ ಲಭಿಸಲೇ ಬೇಕಾಗಿದೆ' ಎಂದು. ಕೊನೆಗೆ, ಖಂಡಿತವಾಗಿಯೂ ತಮಗೆ ಶಿಕ್ಷೆ ಲಭಿಸಲಿದೆ ಎಂದು ಮನಗಂಡ ಆ ಅಪರಾಧಿಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಬಂದು ಕ್ಷಮೆ ಯಾಚಿಸಿದರು. ಹಝ್ರತ್ ಸಾಹೇಬ್ ಅವರನ್ನು ಕ್ಷಮಿಸಿಬಿಡುವಂತೆ ಮನವಿ ಮಾಡಲು ತನ್ನ ವಕೀಲರಿಗೆ ತಿಳಿಸಿದರು. ಆಗ ಅವರು ಹೇಳಿದರು– ಈ ಅಪರಾಧಿಗಳ ಬಗ್ಗೆ ಏನೂ ಶಿಫಾರಸು ಮಾಡಲಾರೆವೆಂದು ಹಾಗೂ ಅವರಿಗೆ ಶಿಕ್ಷೆ ಲಭಿಸಲೇಬೇಕೆಂದು ನಾವು ಈಗಾಗಲೇ ತಿಳಿಸಿರುತ್ತೇವೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು 'ಈಗ ಇವರು ಕ್ಷಮೆ ಯಾಚಿಸುತ್ತಿರುವಾಗ ನಾವು ಮತ್ತೇನು ಮಾಡಲು ಸಾಧ್ಯ.' ನಂತರ ನ್ಯಾಯಾಧೀಶರು ಹೇಳಿದರು– 'ನೋಡಿದಿರಾ, ನಾನು ಹೇಳಿದಂತೆಯೇ ಆಯಿತು. ಮಿರ್ಝಾ ಸಾಹೇಬರಂತೂ ಅವರನ್ನು ಕ್ಷಮಿಸಿಬಿಟ್ಟಿದ್ದಾರೆ.'

ಈ ವಿವರಿಸಲ್ಪಡುವ ಘಟನೆಗಳು ನಮ್ಮನ್ನು ಭಾವೋದ್ವೇಗಭರಿತರನ್ನಾಗಿ ಮಾಡಿದರೆ ಸಾಕಾಗಲಾರವು. ನಾವು ಆ ಘಟನೆಗಳನ್ನು ನಮಗೆ ಸಹ ಅನ್ವಯಿಸಿ ವರ್ತಿಸಬೇಕು. ಕ್ಷಮಿಸುವ ಬಗ್ಗೆ ಧಾರಾಳ ಲಕ್ಷ್ಯ ನೀಡುವ ಆವಶ್ಯಕತೆ ಇರುತ್ತದೆ."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪುನಃ ಹೀಗೆ ಹೇಳುತ್ತಾರೆ: "ಹಝ್ರತ್ ಮಸೀಹ್

ಮೌಊದ್ ಅಲೈಹಿಸ್ಸಲಾಮ್ ತನ್ನ ವಿರೋಧಿಗಳೊಂದಿಗೆ ಧಾರ್ಮಿಕ ಸಭೆಗಳನ್ನು ನಡೆಸಿ ಪ್ರತಿಯೊಬ್ಬನು ತನ್ನ ತನ್ನ ನಂಬಿಕೆಗಳನ್ನು ವಿವರಿಸುವಂತೆ ಸಲಹೆ ನೀಡಿದರು. ಆದರೆ ಅವರು ಹೀಗೆ ಹೇಳಲಿಲ್ಲ 'ನಾನು ದೇವನಿಂದ ನೇಮಿಸಲ್ಪಟ್ಟಿದ್ದೇನೆ. ಆದುದರಿಂದ ಇತರರು ಧರ್ಮ ಪ್ರಚಾರ ನಿಲ್ಲಿಸಬೇಕು.' ಎಂದು ಅವರು ಹೇಳಲಿಲ್ಲ. ತನಗೆ ಧರ್ಮ ಪ್ರಚಾರದ ಹಕ್ಕು ಇರುವ ಹಾಗೆ ಅನ್ಯರಿಗೆ ಸಹ ಅವರ ನಂಬಿಕೆಗಳನ್ನು ಪ್ರಚಾರ ಮಾಡುವ ಹಕ್ಕು ಇದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಿಳಿದಿದ್ದರು. ಅವರು ಹೇಳಿದರು: ನೀವು ನಿಮ್ಮ ವಾದ ಪ್ರಕಟಿಸಿರಿ. ನಾನು ನನ್ನ ವಾದ ಪ್ರಕಟಿಸುವೆನು.''

ಹೀಗೆ ವರ್ತಿಸಿದರೆ ಮಾತ್ರ ದೇಶದಲ್ಲಿ ಶಾಂತಿ ಸ್ಥಾಪನೆ ಉಂಟಾಗುವುದು. ಹೀಗೆ ಮಾಡದೆ ಸತ್ಯವು ಪ್ರಚಾರಗೊಳ್ಳಲಾರದು. ಲೋಕದಲ್ಲಿ 'ನಾನು ಸತ್ಯದಲ್ಲಿದ್ದೇನೆ' ಎಂದು ಹೇಳದವನು ಯಾರಿದ್ದಾನೆ? ಅಭಿಪ್ರಾಯಗಳಲ್ಲಿ ವ್ಯತ್ಯಾಸವಿರುವಾಗ ಅವುಗಳನ್ನು ಪ್ರಕಟಪಡಿಸಲು ಸಂದರ್ಭ ನೀಡಬೇಕಾದುದು ಆವಶ್ಯಕವಾಗಿದೆ. ಈ ಸತ್ಯವನ್ನು ಪಾಕಿಸ್ತಾನದ ಸರಕಾರ ಮತ್ತು ಅರಬ್ ಲೋಕ ಅರ್ಥ ಮಾಡಿಕೊಂಡರೆ ತಬ್ಲೀಗ್‌ನ ಮಾರ್ಗ ವಿಶಾಲವಾಗುವುದು. ಯಾರು ಸತ್ಯದಲ್ಲಿದ್ದಾರೆಂದು ಆಗ ಅವರು ಸ್ವತಃ ತಿಳಿದುಕೊಳ್ಳುವರು.

ಮಹಾರಾಣಿಗೆ ತಬ್ಲೀಗ್ ಮಾಡಿದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ಹಿಂದಿನ ಕಾಲದಲ್ಲಿ ಒಬ್ಬ ದೊರೆಗೆ ತಬ್ಲೀಗ್ ಮಾಡಲು ಯಾರಿಗೆ ತಾನೆ ಧೈರ್ಯವಿರಲು ಸಾಧ್ಯ! ಇದು ಬಹಳ ದೊಡ್ಡ ಗೌರವಚ್ಯುತಿ ಎಂದು ಗಣಿಸಲ್ಪಡುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬ್ರಿಟಿಷ್ ಸಾಮ್ರಾಜ್ಯದ ಮಹಾರಾಣಿ ವಿಕ್ಟೋರಿಯಾರಿಗೆ ಪತ್ರ ಬರೆದರು. ಅವರು ಭಾರತದ ರಾಣಿಯೂ ಆಗಿದ್ದರು. 'ನೀವು ಇಸ್ಲಾಮ್ ಧರ್ಮವನ್ನು ಅಂಗೀಕರಿಸಿರಿ. ಅದರಲ್ಲಿ ಸೇರಿರಿ ಅದು ನಿಮಗೆ ಉತ್ತಮವಾಗುವುದು' ಎಂದು ಆಹ್ವಾನಿಸಿದರು. ಈ ಪತ್ರದ ಬಗ್ಗೆ ಮಹಾರಾಣಿ ಅತೃಪ್ತಿ ಸೂಚಿಸಲಿಲ್ಲ. ಆ ಪತ್ರಕ್ಕೆ ಉತ್ತರವಾಗಿ 'ನಿಮ್ಮ ಪತ್ರಕ್ಕೆ ಕೃತಜ್ಞತೆಗಳು ನಿಮ್ಮ ಪತ್ರ ಓದಿ ಸಂತೋಷವಾಯಿತು' ಎಂದು ಬರೆದರು.'' ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು 'ಏಜಂಟ್' ಎಂದು ಆಕ್ಷೇಪಿಸುವವರು ಇಂದು ಸಹ ಇಂತಹ ನಾಯಕರಿಗೆ ಇಸ್ಲಾಮಿನ ತಬ್ಲೀಗ್ ಮಾಡಲು ಶಕ್ತರಾಗಿಲ್ಲ.

ತುರ್ಕೀ ದೇಶದ ರಾಯಭಾರಿಗೆ ಸಂಬಂಧಿಸಿದ ಒಂದು ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ಹೀಗೆ ವಿವರಿಸುತ್ತಾರೆ: ''ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜೀವಿಸಿದ್ದಾಗ ತುರ್ಕೀ ದೇಶದ ಒಬ್ಬ ರಾಯಭಾರಿ ಖಾದಿಯಾನಿಗೆ ಬಂದು ಹಝ್ರತ್ ಸಾಹೇಬರನ್ನು ಭೇಟಿಯಾದರು. ಅವರು ತುರ್ಕೀ ಸರಕಾರವನ್ನು ಬಲಪಡಿಸಲು ಮುಸ್ಲಿಮರಿಂದ ಬಹಳ ಹಣ ದೇಣಿಗೆಯಾಗಿ ಸಂಗ್ರಹಿಸಲು ಬಂದಿದ್ದರು. ಹುಸೇನ್ ಕಾಮೀ ಎಂಬ ಹೆಸರಿನ ಆತನು ಖಾದಿಯಾನ್‌ನಿಂದ ತನಗೆ ಹೆಚ್ಚು ಸಹಾಯ ಸಿಗುವುದು ಎಂದು ಭಾವಿಸಿರಬಹುದು. ಅವರನ್ನು ಒಬ್ಬ ಅತಿಥಿ ಎಂಬ ನೆಲೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಗೌರವಿಸಿದರು. ಅವರೊಂದಿಗೆ ಧಾರ್ಮಿಕ ಸಂಭಾಷಣೆಯೂ ನಡೆಯಿತು. ಆಗ ಅವರಿಗೆ ಉಪದೇಶ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: 'ನೀವು ಸರಕಾರದಿಂದ ದೊಡ್ಡ ಸಂಬಳ ಪಡೆದು ಅವರ ವಿರುದ್ಧವಾಗಿ ವರ್ತಿಸುತ್ತಿರುವಿರಿ. ನೀವು ಭಯಭಕ್ತಿ ಹೊಂದಿ ಸರಕಾರವನ್ನು ಬಲಪಡಿಸುವ ಕೆಲಸ ಮಾಡಬೇಕಾಗಿದೆ' ಎಂದು ಹೇಳಿದರು. ಇದರಿಂದ ಕೋಪಗೊಂಡು ಅವರು ಖಾದಿಯಾನ್‌ನಿಂದ ಮರಳಿದರು. ಅವರು ಹೇಳ ತೊಡಗಿದರು: 'ಇವರು ಇಸ್ಲಾಮೀ ಸರಕಾರದ ಅಪಮಾನ ಮಾಡುತ್ತಿದ್ದಾರೆ' ಎಂದು. ಆಗ ಮೌಲವಿಗಳು ಸಹ ಬೊಬ್ಬೆ ಹೊಡೆಯಲು ತೊಡಗಿದರು. ಇಸ್ಲಾಮಿನ ಎರಡು ಪುಣ್ಯ ಕೇಂದ್ರಗಳಾದ ಮಕ್ಕ ಮದೀನಗಳ ಸಂರಕ್ಷಕರನ್ನು ಅಪಮಾನಿಸಲಾಗುತ್ತಿದೆ ಎಂದು ಹೇಳಿ ಗುಲ್ಲೆಬ್ಬಿಸಿದರು. ಅದು ತೀವ್ರಗೊಂಡಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಹೀಗೆ ಉತ್ತರ ಹೇಳಿದರು: 'ಮಕ್ಕ ಮತ್ತು ಮದೀನಗಳನ್ನು ಸಂರಕ್ಷಣೆ ಮಾಡುತ್ತಿರುವುದು ತುರ್ಕೀ ಸರಕಾರ ಎಂದು ನೀವು ಭಾವಿಸುತ್ತಿರುವಿರಿ. ಆದರೆ ಮಕ್ಕ ಮದೀನ ಸಂರಕ್ಷಿಸಲು ತುರ್ಕೀ ಸರಕಾರಕ್ಕೆ ಏನು ಅರ್ಹತೆ ಇದೆ. ಮಕ್ಕ ಮದೀನಗಳೇ ತುರ್ಕೀ ಸರಕಾರವನ್ನು ಸಂರಕ್ಷಿಸುತ್ತಿವೆ.' ಮಕ್ಕ ಮದೀನಗಳನ್ನು ಒಂದು ಸರಕಾರ ರಕ್ಷಿಸುತ್ತಾ ಇದೆ ಎಂದು ಹೇಳಲು ನಾವು ಖಂಡಿತ ಒಪ್ಪಲಾರೆವು. ಅಲ್ಲಾಹನೇ ಮಕ್ಕ ಮದೀನಗಳನ್ನು ಸಂರಕ್ಷಿಸುತ್ತಿದ್ದಾನೆಂದು ನಾವು ಗ್ರಹಿಸುತ್ತೇವೆ. ಒಬ್ಬ ಮನುಷ್ಯನು ಅದರ ಕಡೆಗೆ ದುರುದ್ದೇಶದಿಂದ ದೃಷ್ಟಿಬೀರಲಾರನು. ಬಾಹ್ಯವಾಗಿ ಶತ್ರು ಅವುಗಳನ್ನು ಆಕ್ರಮಿಸಿದರೆ ಆಗ ಮಾನವರ ಕೈಗಳು ಸಹ ಅದರ ಸಂರಕ್ಷಣೆಗೋಸ್ಕರ ಚಾಚಲ್ಪಡುವುವು. ಎಂದಾದರೂ ಇಂತಹ ಸಂದರ್ಭ ಉಂಟಾದರೆ ಆಗ ಲೋಕವು ತಿಳಿದುಕೊಳ್ಳುವುದು. ಸಂರಕ್ಷಣೆಯ ಬಗ್ಗೆ ಮನುಷ್ಯರಿಗೆ ಅಲ್ಲಾಹನು ಹೊರಿಸಿದ ಹೊಣೆಗಾರಿಕೆಯನ್ನು ಅಹ್ಮದಿಯಾ ಜಮಾಅತ್ ಎಲ್ಲರಿಗಿಂತ ಹೆಚ್ಚು ಬಲಿದಾನ ಅರ್ಪಿಸಿ ಈಡೇರಿಸುವುದು ಎಂದು. ನಾವು ಅವುಗಳನ್ನು ಅತ್ಯಂತ ಪವಿತ್ರ ಕ್ಷೇತ್ರಗಳೆಂದು ಗಣಿಸುತ್ತೇವೆ. ನಾವು ಅವುಗಳನ್ನು ಅಲ್ಲಾಹನ ಪ್ರತಾಪದ ಪ್ರಕಟಣೆಯ ಸ್ಥಳಗಳೆಂದು ಗಣಿಸುತ್ತೇವೆ. ಅವುಗಳನ್ನು ಸಂರಕ್ಷಿಸಲಿಕ್ಕಾಗಿ ನಮಗೆ ಅತ್ಯಂತ ಪ್ರಿಯವಾದವುಗಳನ್ನು ಬಲಿದಾನ ನೀಡಬೇಕಾಗಿ ಬಂದರೆ, ಅದೊಂದು ಭಾಗ್ಯವೆಂದು ನಾವು ಭಾವಿಸುತ್ತೇವೆ. ಯಾರಾದರೂ ಮಕ್ಕದ ಕಡೆಗೆ ಕೆಟ್ಟ ದೃಷ್ಟಿಯನ್ನು ಒಮ್ಮೆಯಾದರೂ ಬೀರಿದರೆ ಅಲ್ಲಾಹನು ಅವನನ್ನು ಅಂಧನನ್ನಾಗಿ ಮಾಡುವನು ಎಂದು ನಾವು ದೃಢವಾಗಿ ನಂಬುತ್ತೇವೆ. ಅಲ್ಲಾಹನು ಎಂದಾದರೂ ಈ ಕೆಲಸವನ್ನು ಮನುಷ್ಯರ ಮೂಲಕ ಈಡೇರಿಸಲು ಬಯಸಿದರೆ, ಕೆಟ್ಟ ದೃಷ್ಟಿ ಬೀರುವ ಕಣ್ಣನ್ನು ಒಡೆದು ಹಾಕಲು ಮುಂದುವರಿಯುವ ಕೈಗಳಲ್ಲಿ ನಮ್ಮ ಕೈಗಳು ಅಲ್ಲಾಹನ ಅನುಗ್ರಹದಿಂದ ಎಲ್ಲಾ ಕೈಗಳಿಗಿಂತ ಮುಂದೆ ಇರುವುದು.''

ಅಲ್ಲಾಹನ ಅನುಗ್ರಹದಿಂದ ಈಗ ಸಹ ಅಹ್ಮದಿಯರ ಹೃದಯಗಳಲ್ಲಿ ಈ ಪವಿತ್ರ ನಗರಗಳ ಬಗ್ಗೆ ಇದೇ ಭಾವನೆಗಳಿವೆ. ಇನ್‌ಶಾ ಅಲ್ಲಾಹ್, ಇನ್ನು ಮುಂದೆ ಸಹ

ಯಾವಾಗಲೂ ಹೀಗೆಯೇ ಇರುವುದು. ಅಲ್ಲಾಹನು ನಮ್ಮ ವಿಶ್ವಾಸವನ್ನು ವರ್ಧಿಸುತ್ತಾ ಹೋಗಲಿ. ಬಲಿದಾನ ನೀಡುವವರಲ್ಲಿ ನಾವು ಮುಂದಿನ ಸಾಲಿನಲ್ಲಿ ಇರುವಂತೆ ಮಾಡಲಿ– ಆಮೀನ್.

ಜುಮುಅ ನಮಾಝ್ ನಂತರ ಎರಡು ನಮಾಝೇ ಜನಾಝು ಗಾಯಿಬ್ ಅನುಷ್ಠಿಸಲಾಯಿತು. ಸಮೀರ್ ಬಹೂತ ಸಾಹೇಬ್ 24–2–2015ರಂದು ಜರ್ಮನಿಯಲ್ಲಿ ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್. ಅವರು ಬೈಅತ್ ಮಾಡಿದ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾರಿಗೆ ತಿಳಿಸಿದಾಗ ಅವರು ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಉಂಟಾದ ಇಲ್‌ಹಾಮ್ **ಯನ್‌ಸುರುಕ ರಿಜಾಲುನ್ ನೂಹೀ ಇಲೈಹಿಮ್ ಮಿನಸ್ಸಮಾಅ್.** (ಆಕಾಶದಿಂದ ಸಂದೇಶವಾಣಿ ಅವತೀರ್ಣಗೊಳಿಸಲ್ಪಡುವ ಪುರುಷರು ನಿನಗೆ ಸಹಾಯ ನೀಡುವರು.) ಎಂಬ ಭವಿಷ್ಯವಾಣಿ ಅವರಿಗೆ ಅನ್ವಯಿಸುತ್ತದೆ ಎಂದು. ಮೃತರು ಈ ಭವಿಷ್ಯವಾಣಿ ಪ್ರಕಾರ ವರ್ತಿಸಿದರು.

ಎರಡನೆಯ ಜನಾಝು ಚೌಧರಿ ಬಶೀರ್ ಅಹ್ಮದ್ ಸಾಹೇಬ್(ಚೌಧರಿ ಇಬ್ರಾಹೀಮ್ ಸಾಹೇಬರ ಪುತ್ರ)ರವರದಾಗಿದೆ. ಶೇಖ್‌ಪುರ ಪಾಕಿಸ್ಥಾನದವರು.

ಇವರಿಬ್ಬರಿಗೆ ಉನ್ನತ ಆಧ್ಯಾತ್ಮಿಕ ಪದವಿ ಅಲ್ಲಾಹನು ನೀಡಲಿ ಎಂದು ಪ್ರಾರ್ಥಿಸಲಾಯಿತು.

---------------*****--------------

*Friday Sermon delivered by Hadrath Khaleefatul Masih Al Khamis*(atba)

*at Masjid Baithul Futhuh, London on 27-02-2015.*

Summarized by *Nazarath Nashr-o-Isha'at,Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

**Email**: *khutuba.kannada@gmail.com*